ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಐ.ಟಿ.ಐ. ಕಾಲೇಜು ಮಂಜೂರು

189 (449) ಶ್ರೀ ಮಂಜುನಾಥ .ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಖಾಸಗೀ ಐ.ಟಿ.ಐ.ಗಳ ಸಂಖ್ಯೆ ಎಷ್ಟು; ಅವುಗಳಿಗೆ ಅನುದಾನ ಮಂಜೂರು ಮಾಡಲಾಗಿದೆಯೇ;

ಆ) ರಾಜ್ಯದಲ್ಲಿರುವ ಸರ್ಕಾರೀ ಐ.ಟಿ.ಐ.ಗಳ ಸಂಖ್ಯೆ ಎಷ್ಟು;

ಇ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಐ.ಟಿ.ಐ. ಮಂಜೂರು ಮಾಡಲಾಗಿದೆಯೆ?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) 246

ಪ್ರಸ್ತುತ ಸಾಲಿನಲ್ಲಿ 128 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಸಹಾಯಾನುದಾನಕ್ಕೆ ಅರ್ಹವಾಗಿದ್ದು, ಅವುಗಳಲ್ಲಿ 118 ಕೈಗಾರಿಕಾ ತರಬೇತಿ ಸಂಸ್ಥೆಗಳು ಅನುದಾನಕ್ಕೆ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಗಳನ್ವಯ ಪರಿವೀಕ್ಷಣೆ ಮಾಡಿ, ಪರಿಶೀಲಿಸಿ ಅವುಗಳಿಗೆ ಸಹಾಯಾನುದಾನವನ್ನು ಮಂಜೂರು ಮಾಡಲಾಗುವುದು.

ಆ) 67

ಇ) ಇಲ್ಲ

ಹಾವೇರಿ ಹಾಗೂ ಗದಗ ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಲಯಗಳ ಸ್ಥಾಪನೆ

190 (507) ಶ್ರೀ ಮಂಜುನಾಥ್ .ಸಿ. ಕುನ್ನೂರ್ : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ರಾಜ್ಯದಲ್ಲಿ ಹಾಗೂ ಧಾರವಾಡ ಜಿಲ್ಲೆ ಪುನರ್ ವಿಂಗಡನೆಯ ನಂತರ 3 ಜಿಲ್ಲೆಗಳಾಗಿದ್ದು, ಹಾವೇರಿ ಗದಗ ಜಿಲ್ಲೆಗಳಲ್ಲಿ ಪ್ರತ್ಯೇಕ ಸಶೇನ್ಸ್ ನ್ಯಾಯಾಲಯ (ಡಿಸ್ಟ್ರಿಕ್ ಕೋರ್ಟ್) ಎಂದು ಪ್ರಾರಂಭ ಮಾಡಲಾಗುವುದು? ಇವುಗಳಿಗೆ ವಿಶೇಷ ಅನುದಾನ ಬಿಡುಗಡೆ ಮಾಡಲಾಗಿದೆಯೇ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು) :

ಜಿಲ್ಲಾ ಪುನರ್ ವಿಂಗಡನೆಯ ಎಂ ಪವರ್ ಕಮಿಟಿಯು ದಿನಾಂಕ 11 ನೇ ಫೆಬ್ರವರಿ 1998 ರಂದು ನಡೆದ ಸಭೆಯಲ್ಲಿ ರಚಿಸಲಾದ ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಸ್ಥಾಪನೆಯ ವಿಚಾರವನ್ನು ಪರಿಶೀಲಿಸಿದ್ದು, ಹಳೆ ಜಿಲ್ಲೆಯಲ್ಲಿನ ಜಿಲ್ಲಾ ನ್ಯಾಯಾಧೀಶರ ಹುದ್ದೆ ಮತ್ತು ಪೂರಕ ಸಿಬ್ಬಂದಿಯ ಹುದ್ದೆಗಳನ್ನು ಮರು ವಿನ್ಯಾಸ (redeploy) ಮಾಡುವ ಮೂಲಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸ್ಥಾಪಿಸಲು ಹೆಚ್ಚುವರಿ ಹುದ್ದೆಗಳನ್ನು ಮಾತ್ರ ಸೃಜಿಸಲು ಅನುಮತಿ ನೀಡಿದ್ದು,